ಕರ್ನಾಟಕ
ಒಂದು ರಾಜ್ಯ. ಹಲವು ಜಗತ್ತುಗಳು.
ಪ್ರವಾಸೋದ್ಯಮ ಇಲಾಖೆ

Karnataka
One state. Many worlds.
Department of Tourism

ಪ್ರವಾಸೋದ್ಯಮ ಇಲಾಖೆ

ಪ್ರವಾಸೋದ್ಯಮ ನಿರ್ದೇಶಕರ ಕಛೇರಿ, ನಂ:03, 4ನೇ ಮಹಡಿ, ಎಂಬೆಸ್ಸಿ ಐಕಾನ್, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು-560001

ಇ-ಮೇಲ್: director@karnatakatourism.org ದೂರವಾಣಿ: 080-22352828 ಫ್ಯಾಕ್ಸ್: 080-22352626

---

**ಸಂಖ್ಯೆ:** PLN/14/2024-DOT-PLN-DIRECTORATE OF TOURISM **ದಿನಾಂಕ:16/12/2024**

## ಜ್ಞಾಪನಾ ಪತ್ರ

ವಿಷಯ: ಎಸ್.ಸಿ.ಎಸ್.ಪಿ. / ಟಿ.ಎಸ್.ಪಿ. ಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಪ್ರವಾಸೋದ್ಯಮ / ಆತಿಥ್ಯ ಕ್ಷೇತ್ರದಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲು ಅರ್ಜಿಗಳನ್ನು ಸಲ್ಲಿಸುವ ಕುರಿತು.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: ಟಿಓಆರ್ 117 ಟಿಡಿಪಿ 2024 (ಭಾ.8), ಬೆಂಗಳೂರು, ದಿನಾಂಕ: 29.11.2024 ಮತ್ತು 13.12.2024.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ಆದೇಶದನ್ವಯ 2024-25ನೇ ಸಾಲಿನಲ್ಲಿ ಪ್ರವಾಸೋದ್ಯಮ/ ಆತಿಥ್ಯ ಕ್ಷೇತ್ರದಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಪರಿಶಿಷ್ಟ ಜಾತಿಗೆ ಸೇರಿದ **292** ಅಭ್ಯರ್ಥಿಗಳಿಗೆ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ **162** ಅಭ್ಯರ್ಥಿಗಳಿಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಆತಿಥ್ಯ ಕ್ಷೇತ್ರದ ಸಂಸ್ಥೆಗಳಾದ Food Craft Institute (FCI), Mysore ಹಾಗೂ Institute of Hotel Management (IHM) ಬೆಂಗಳೂರು ರವರ ಮೂಲಕ ವಸತಿಸಹಿತ ಕಾರ್ಯಕ್ರಮವನ್ನು ಜಾರಿಗೊಳಿಸಲು ಉದ್ದೇಶಿಸಲಾಗಿರುತ್ತದೆ.

ಸದರಿ ತರಬೇತಿ ಕಾರ್ಯಕ್ರಮಗಳ ವಿವರ / ಅಭ್ಯರ್ಥಿಗಳ ವಿದ್ಯಾರ್ಹತೆಯ ವಿವರಗಳನ್ನು ಕೆಳಕಂಡ ಕೋಷ್ಟಕದಲ್ಲಿ ವಿವರಿಸಿದೆ.

| ಕ್ರ. ಸಂ | ಕಾರ್ಯಕ್ರಮದ ವಿವರ | ಕನಿಷ್ಠ ವಿದ್ಯಾರ್ಹತೆ | ತರಬೇತಿ ಕಾಲಾವಧಿ **(By Training Provider + on-the-Job Training (OJT)** | ವಯಸ್ಸು | ಪ್ರತಿ ತರಬೇತಿಗೆ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳ ಗುರಿ | ಪ್ರತಿ ತರಬೇತಿಗೆ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ಗುರಿ |
|---|---|---|---|---|---|---|
| 1 | Food & Beverage Service Steward | 10th Class Pass | 540 Hours (300 Hours + 240 Hours OJT) 15 Weeks (04 Months) | Above 20 to 45 Years | 100 | 49 |
| 2 | Room Attendant | 5th Class Pass | 540 Hours (300 Hours + 240 Hours OJT) 15 Weeks (04 Months) | Above 20 to 45 Years | 30 | 19 |
| 3 | Front Office Associate | 12th Class Pass | 580 Hours (340 Hours + 240 Hours OJT) 16 Weeks (04 Months) | Above 20 to 45 Years | 15 | 5 |
| 4 | Multi Cuisine Cook | 8th Class Pass | 740 Hours (500 Hours + 240 Hours OJT) 20 Weeks (05 Months) | Above 20 to 45 Years | 147 | 89 |
| **Total** | | | | | **292** | **162** |

ಉಲ್ಲೇಖಿತ ಸರ್ಕಾರದ ಆದೇಶದನ್ವಯ ಪರಿಶೀಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳಿಗೆ ಪ್ರವಾಸೋದ್ಯಮ /ಆತಿಥ್ಯ ಕ್ಷೇತ್ರದಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಈ ಕೆಳಕಂಡ ವಿಷಯಗಳಿಗೆ ಕೂಡಲೇ ಅಗತ್ಯ ಕ್ರಮವನ್ನು ಕೈಗೊಳ್ಳಲು ಸೂಚಿಸಿದೆ.

- ಈ ಮೇಲ್ಕಂಡ ಕೋಷ್ಟಕದಲ್ಲಿ ವಿವರಿಸಿರುವ ಕಾರ್ಯಕ್ರಮಗಳ ಬಗ್ಗೆ ತಮ್ಮ ತಮ್ಮ ಜಿಲ್ಲೆಗಳಲ್ಲಿ ಜಿಲ್ಲಾ ದಿನಪತ್ರಿಕೆಗಳಲ್ಲಿ ದಿನಾಂಕ: 18.12.2024 ರಂದು ಪ್ರಕಟಣೆ ನೀಡಿ, ಅರ್ಜಿಗಳನ್ನು ಆಹ್ವಾನಿಸಲು ಅಗತ್ಯ ಕ್ರಮವಹಿಸುವುದು.
- ಎಲ್ಲಾ ಜಿಲ್ಲೆಗಳಲ್ಲಿನ ಜಂಟಿ ನಿರ್ದೇಶಕರು / ಉಪ ನಿರ್ದೇಶಕರು / ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆಯ ಕಛೇರಿಯಲ್ಲಿ ಅರ್ಜಿಗಳನ್ನು ವಿತರಿಸುವುದು. (ಅರ್ಜಿ ನಮೂನೆ ಈ ಪತ್ರದೊಂದಿಗೆ ಲಗತ್ತಿಸಿದೆ)

.....2

- ಸದರಿ ತರಬೇತಿ ಪಡೆಯಲು ಅಸಕ್ತಿ ಇರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಸದರಿ ತರಬೇತಿ ಕಾರ್ಯಕ್ರಮಗಳಿಗೆ ದಿನಾಂಕ: 28/12/2024 ರೊಳಗೆ ಸಲ್ಲಿಸುವ ಅರ್ಜಿಗಳನ್ನು ಆಯಾ ಜಿಲ್ಲೆಗಳ ಉಪ ನಿರ್ದೇಶಕರು ಹಾಗೂ ಸಹಾಯಕ ನಿರ್ದೇಶಕರು ಪ್ರವಾಸೋದ್ಯಮ ಇಲಾಖೆ ರವರುಗಳು ಪರಿಶೀಲಿಸಿ ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸಿ ಕೇಂದ್ರ ಕಛೇರಿಗೆ ದಿನಾಂಕ: 30/12/2024 ರೊಳಗೆ ಸಲ್ಲಿಸುವುದು.
- ಮೇಲಿನ ಪಟ್ಟಿಯಲ್ಲಿ ನಿಗಧಿಪಡಿಸಿರುವ ಗುರಿಗಿಂತ ಹೆಚ್ಚು ಅರ್ಜಿಗಳು ಸ್ವೀಕೃತವಾದರೂ ಸದರಿ ಅರ್ಜಿಗಳನ್ನು ಪರಿಶೀಲಿಸಿ ಆಯ್ಕೆಪಟ್ಟಿ ಸಿದ್ಧಪಡಿಸಿ ಕೇಂದ್ರ ಕಛೇರಿಗೆ ಸಲ್ಲಿಸುವುದು.

16/12/24

ಜಂಟಿ ಆಯುಕ್ತರು,
ಪ್ರವಾಸೋದ್ಯಮ ಇಲಾಖೆ.

ಗೆ,
ಎಲ್ಲಾ ಜಿಲ್ಲೆಗಳ ಜಂಟಿ/ಉಪ /ಸಹಾಯಕ ನಿರ್ದೇಶಕರುಗಳು, ಪ್ರವಾಸೋದ್ಯಮ ಇಲಾಖೆ.

## ಎಸ್.ಸಿ.ಎಸ್.ಪಿ. / ಟಿ.ಎಸ್.ಪಿ. ಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಪ್ರವಾಸೋದ್ಯಮ / ಆತಿಥ್ಯ ಕ್ಷೇತ್ರದಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯವಕ್ಕೆ ಅರ್ಜಿ

### ಅರ್ಜಿ ನಮೂನೆ

ಅರ್ಜಿದಾರರ 02 ಭಾವಚಿತ್ರಗಳು

ಅರ್ಜಿ ಸಂಖ್ಯೆ: [ ]

1. ಹೆಸರು : ____________________

2. ತಂದೆ /ತಾಯಿ/ ಪತಿ/ ಪತ್ನಿ ಹೆಸರು: ____________________

3. ಖಾಯಂ ವಿಳಾಸ : ____________________

____________________

4. ದೂರವಾಣಿ ಸಂಖ್ಯೆ: ____________________

5. ಇ-ಮೇಲ್: ____________________

6. ಹುಟ್ಟಿದ ದಿನಾಂಕ : [ ][ ]-[ ][ ]-[ ][ ][ ][ ]

7. ವಯಸ್ಸು: ವರ್ಷಗಳು [ ][ ]

8. ಲಿಂಗ: ಪುರುಷ ಮಹಿಳೆ: [ ] [ ]

9. ಸಮುದಾಯ: ಪ.ಜಾ [ ] ಪ.ಪಂ [ ] (ಜಾತಿ ಪ್ರಮಾಣ ಪತ್ರ ಪಡೆದಿರುವ ಆರ್.ಡಿ. ಸಂಖ್ಯೆ

10. ಜಾತಿ ಪ್ರಮಾಣ ಪತ್ರ ಪಡೆದಿರುವ ಆರ್.ಡಿ. ಸಂಖ್ಯೆ [ ]

11. ಶೈಕ್ಷಣಿಕ ವಿದ್ಯಾರ್ಹತೆ : ____________________

(ಅಂಕಪಟ್ಟಿ ಲಗತ್ತಿಸುವುದು).

ಈ ಕೆಳಕಂಡ ತರಬೇತಿ ಕಾರ್ಯಕ್ರಮದಲ್ಲಿ ಒಂದು ತರಬೇತಿಯನ್ನು ಮಾತ್ರ ಆಯ್ಕೆಮಾಡುವುದು

| ಕಾರ್ಯಕ್ರಮದ ವಿವರ | ಆಯ್ಕೆಮಾಡಿರುವ ತರಬೇತಿ |
|---|---|
| Food & Beverage Service Steward | |
| Room Attendant | |
| Front Office Associate | |
| Multi Cuisine Cook | |

ಮೇಲೆ ತಿಳಿಸಿರುವ ವಿವರಗಳು ಸತ್ಯವಾದವುಗಳೆಂದು ಹಾಗೂ ಈ ವಿವರಗಳಲ್ಲಿ ಯಾವುದೇ ತಪ್ಪು ಕಂಡುಬಂದ ಪಕ್ಷದಲ್ಲಿ ನನ್ನ ಪ್ರವೇಶವನ್ನು ತಿರಸ್ಕರಿಸಲಾಗುವುದೆಂದು ನನಗೆ ತಿಳಿದಿದೆ ಎಂದು ದೃಢೀಕರಿಸುತ್ತೇವೆ.

ಅರ್ಜಿದಾರರ ಸಹಿ____________________

ದಿನಾಂಕ: ____________________

*****